


ಎಂ.ಕೆ. ಮಂಜುನಾಥ್

ಕಲೆ: ಗಣೇಶ ಆಚಾರ್ಯ

# ನರಿಯ ಜಾಣತನ

ಒಂದೂರಿನಲ್ಲಿ ಒಬ್ಬ ರೈತ ತನ್ನ ಗದ್ದೆಯಲ್ಲಿ ಫಲವತ್ತಾದ ಕಬ್ಬನ್ನು ಬೆಳೆಯುತ್ತಿದ್ದ. ಫಲವೇನೋ ತುಂಬಾ ಚೆನ್ನಾಗಿ ಬರುತ್ತಿತ್ತು. ಆದರೆ, ರಾತ್ರಿ ವೇಳೆಯಲ್ಲಿ ಯಾರೋ ತನ್ನ ಗದ್ದೆಗೆ ನುಗ್ಗಿ ಕಬ್ಬು ತಿನ್ನುತ್ತಿರುವುದು ಗಮನಕ್ಕೆ ಬಂದಿತು. ಒಂದು ದಿನ ಅವನು ಏನಾದರೂ ಮಾಡಿ ಕಳ್ಳರನ್ನು ಹಿಡಿಯಲೇಬೇಕೆಂದು ನಿರ್ಧರಿಸಿ ರಾತ್ರಿ ಯಾರಿಗೂ ಕಾಣದಂತೆ ಅವಿತುಕೊಂಡು ಹೊಂಚುಹಾಕಿ ಕಾಯುತ್ತಾ ಕುಳಿತ. ಸ್ವಲ್ಪ ಹೊತ್ತಿನಲ್ಲೇ ಒಂದು ಗುಳ್ಳೇನರಿ ಮೆಲ್ಲನೆ ಅತ್ತಿತ್ತ ನೋಡುತ್ತ ಅವನ ಗದ್ದೆಯೊಳಗೆ ನುಸುಳುತ್ತಿರುವುದು ಅವನಿಗೆ ಕಾಣಿಸಿತು. ಕೂಡಲೇ ರೈತ ಅದನ್ನು ಹಿಡಿಯಲು ಪ್ರಯತ್ನ ಪಟ್ಟ. ಆದರೆ, ಆ ನರಿ ಚಾಣಾಕ್ಷತನದಿಂದ ಅವನ ಕೈಗೆ ಸಿಗದೆ ತಪ್ಪಿಸಿಕೊಂಡು ಓಡಿ ಹೋಯಿತು. ಇದೇ ರೀತಿ ಎರಡು ಮೂರು ಬಾರಿ ಆಯಿತು. ನರಿಯನ್ನು ಹೇಗೆ ಹಿಡಿಯುವುದು ಎಂದು ಯೋಚಿಸುತ್ತಿದ್ದ ರೈತನಿಗೆ ಒಂದು ಉಪಾಯ ಹೊಳೆಯಿತು.

ಮಾರನೆಯ ದಿನ ರಾತ್ರಿ ಅವನು ಒಂದು ಕೈಯಲ್ಲಿ ಬಟ್ಟಲ ತುಂಬಾ ಮೊಸರನ್ನ, ಇನ್ನೊಂದು ಕೈಯಲ್ಲಿ ಬಲವಾದ ದೊಣ್ಣೆಯನ್ನು ಹಿಡಿದುಕೊಂಡು ತನ್ನ ಗದ್ದೆಯಲ್ಲಿ ಕಣ್ಣುಗಳನ್ನು ಮುಚ್ಚಿಕೊಂಡು ಅಲುಗಾಡದೆ ಸತ್ತವನಂತೆ ಅಂಗಾತ ಮಲಗಿಕೊಂಡ. ನರಿ ಏನಾದರೂ ಬಂದು ಮೊಸರನ್ನಕ್ಕೆ ಬಾಯಿ ಹಾಕಿದರೆ ದೊಣ್ಣೆಯಿಂದ ಬಾರಿಸಿಬಿಡಬೇಕು ಎಂದುಕೊಂಡ. ಅವನು ಎಣಿಸಿದಂತೆ ಸ್ವಲ್ಪ ಸಮಯದ ನಂತರ ಕಳ್ಳಹೆಜ್ಜೆಯಿಡುತ್ತ ನಿಧಾನವಾಗಿ ನರಿ ಬರುತ್ತಿರುವುದು ಕಾಣಿಸಿತು. ರೈತ